## ಸಂಪನ್ಮೂಲ ವಿಮರ್ಶೆ

# ಚಟುವಟಿಕೆ ಹಾಳೆ III: ಮಾನವ ನಿರ್ಮಿತ ರಚನೆಗಳ ಬಳಕೆಗಳನ್ನು ಗಮನಿಸಿ

**ಉದ್ದೇಶ:**

ನಿಮ್ಮ ಶಾಲೆಯ ಅಥವಾ ಮನೆಯ ಹತ್ತಿರವಿರುವ ಗೋಡೆಗಳು, ಫುಟ್‌ಪಾತ್‌ಗಳು ಮತ್ತು ಬೇಲಿಗಳ ಮೇಲೆ ನೀವು ಕೆಲವು ಜೀವಿಗಳನ್ನು (ಗಿಡ ಅಥವಾ ಪ್ರಾಣಿಗಳನ್ನು) ನೋಡಿರಬಹುದು. ಸಿಮೆಂಟ್, ಮರ, ಲೋಹ, ಇಟ್ಟಿಗೆ ಮತ್ತು ಕಲ್ಲುಗಳಿಂದ ಮಾಡಿದ ಈ ರಚನೆಗಳನ್ನು ಆ ಜೀವಿಗಳು ಯಾವ ಉದ್ದೇಶಕ್ಕಾಗಿ ಬಳಸುತ್ತವೆ ಎಂದು ನೀವು ಆಲೋಚಿಸಿದ್ದೀರಾ? ನಾವು ನೋಡಿದ ಕೆಲವು ಉದಾಹರಣೆಗಳು ಇಲ್ಲಿವೆ:



☐

**ವಾಸಸ್ಥಳವಾಗಿ:**
ಗೋಡೆಯ ಮೇಲೆ ಕಣಜ ಗೂಡು ಕಟ್ಟುವುದನ್ನು ನೋಡಿದ್ದೀರಾ? ಅವುಗಳ ಗೂಡು ಯಾವುದರಿಂದ ಮಾಡಲ್ಪಟ್ಟಿದೆ ಎಂದು ನಿಮಗನಿಸುತ್ತದೆ?



☐

**ಅಡಗಿಕೊಳ್ಳಲು ಅಥವಾ ಪರಿಸರಕ್ಕೆ ತಕ್ಕಂತೆ ಬಣ್ಣ ಬದಲಿಸಲು:**
ಜೇಡಗಳು, ಪತಂಗಗಳು, ಹಲ್ಲಿಗಳು ಅಥವಾ ಬೇಟೆಗಾರ ಹುಳುಗಳು ಗೋಡೆಯ ಬಣ್ಣಕ್ಕೆ ತಕ್ಕಂತೆ ತಮ್ಮನ್ನು ಹೇಗೆ ಮರೆಮಾಚಿಕೊಳ್ಳುತ್ತವೆ ಎಂದು ಗಮನಿಸಿದ್ದೀರಾ?



☐

**ಸಂಚರಿಸಲು:**
ಇರುವೆಗಳು, ಕಂಬಳಿಹುಳುಗಳು ಅಥವಾ ಹಲ್ಲಿಗಳು ಇಂತಹ ರಚನೆಗಳ ಮೇಲೆ ಓಡಾಡುವುದನ್ನು ನೋಡಿದ್ದೀರಾ? ಅವುಗಳಂತೆ ಚಲಿಸಲು ನಿಮಗೂ ಸಾಧ್ಯವೇ?



☐

**ಆಧಾರಕ್ಕಾಗಿ:** ಗೋಡೆಯ ಬಿರುಕುಗಳಲ್ಲಿ ಅಥವಾ ಸಂದುಗಳಲ್ಲಿ ಹುಲ್ಲು, ಬಳ್ಳಿಗಳು, ಪಾಚಿ ಮತ್ತು ಅತ್ತಿ ಮರದ ಪುಟ್ಟ ಸಸಿಗಳು ಬೆಳೆಯುವುದನ್ನು ನೋಡಿದ್ದೀರಾ?

ನೀವು ಇವುಗಳಲ್ಲಿ ಎಷ್ಟನ್ನು ನೋಡಿದ್ದೀರಾ? ನೀವು ನೋಡಿರುವ ಜೀವಿಗಳ ಚಿತ್ರದ ಪಕ್ಕ ✔ ಗುರುತು ಹಾಕಿ. ಇತರ ಜೀವಿಗಳು ಮಾನವ ನಿರ್ಮಿತ ವಸ್ತುಗಳನ್ನು ಯಾವ ರೀತಿಗಳಲ್ಲಿ ಬಳಸುತ್ತವೆ ಎಂಬುದನ್ನು ನೀವು ಗಮನಿಸಿದ್ದೀರಾ? ಅಂತಹವುಗಳನ್ನು ನಿಮ್ಮ ನೋಟ್‌ಬುಕ್‌ನಲ್ಲಿ ಚಿತ್ರ ಬಿಡಿಸುವ ಮೂಲಕ ದಾಖಲಿಸಿ.

---

**ಕೊಡುಗೆ:**

**ನೇಚರ್ ಕ್ಲಾಸ್‌ರೂಮ್ಸ್** ಸಂಸ್ಥೆಯು ಪೂರ್ವಸಿದ್ಧತಾ ಹಂತದ ಪರಿಸರ ಅಧ್ಯಯನದ ಬೋಧನೆ ಮತ್ತು ಕಲಿಕೆಗೆ ಪೂರಕವಾದ ಪ್ರಕೃತಿ ಶಿಕ್ಷಣದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುತ್ತದೆ. ಅಲ್ಲದೆ, ಇದು ಶಾಲಾ ಶಿಕ್ಷಕರು ಮತ್ತು ಶಿಕ್ಷಣ ತಜ್ಞರಿಗಾಗಿ ಪ್ರಕೃತಿ ಕಲಿಕೆಯ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರಗಳನ್ನು ನಡೆಸುತ್ತದೆ. ಈ ಹಾಳೆಯಲ್ಲಿರುವ ರೇಖಾಚಿತ್ರಗಳಿಗೆ ಬಳಸಲಾದ ಛಾಯಾಚಿತ್ರಗಳನ್ನು ಸ್ಯಾಮ್ಯುಯೆಲ್ ಜಾನ್, ವೀಣಾ ಕಪೂರ್ ಮತ್ತು ನಯನತಾರಾ ಸಿರುಗುರಿ ಅವರು ಒದಗಿಸಿದ್ದಾರೆ. ನೇಚರ್ ಕ್ಲಾಸ್‌ರೂಮ್ಸ್ ಈ ಸಂಪನ್ಮೂಲದ ಹಕ್ಕುಗಳನ್ನು ಹೊಂದಿದ್ದು, ಇದನ್ನು CC BY-SA 4.0 ಪರವಾಗಿಯ ಅಡಿಯಲ್ಲಿ ಹಂಚಿಕೊಳ್ಳಲಾಗಿದೆ. ಈ ಆವೃತ್ತಿಯನ್ನು ಐ ವಂಡರ್... ಪತ್ರಿಕೆಯ ಓದುಗರಿಗಾಗಿ ಮಾರ್ಪಡಿಸಲಾಗಿದೆ ಮತ್ತು ಹಕ್ಕುಸ್ವಾಮ್ಯ ಹೊಂದಿರುವವರ ಅನುಮತಿಯೊಂದಿಗೆ ಪ್ರಕಟಿಸಲಾಗಿದೆ. ನೇಚರ್ ಕ್ಲಾಸ್‌ರೂಮ್ಸ್‌ನ ಹೆಚ್ಚಿನ ಕಾರ್ಯಗಳನ್ನು ನೀವು ಅವರ ಜಾಲತಾಣದಲ್ಲಿ ನೋಡಬಹುದು.

Nature Classrooms

ಐ ವಂಡರ್...
ರೀಡಿಸ್ಕವರಿಂಗ್ ಸ್ಕೂಲ್ ಸೈನ್ಸ್

ಅನುವಾದ: **ಚಂದ್ರಿಕಾ ವಿಜಯೇಂದ್ರ** | ಪರಿಶೀಲನೆ: **ಪಿ. ಜಿ. ಸ್ಮಿತಾ**